



























# RAMESHA M.H.

**NAPSWI Young Achiever Awardee-2019**

**Mob: 9980066890**

Ramesha Niratanka rameshaniratanka www.niratanka.org, www.nirutapublications.org

# Awards & Certificates Recieved by Ramesha M.H.

## NATIONAL ASSOCIATION OF PROFESSIONAL SOCIAL WORKERS IN INDIA

NAPSWI Young Achiever Award 2019

Sh. Ramesha MH



**It gives us immense pleasure to confer upon you in the NAPSWI Scroll of Appreciation. The NAPSWI feels proud and privileged to claim you as one of our most distinguished practitioners.**

**Born on July 22, 1981in Bangalore in the family of agriculture background , Mr Rmesha Completed MSW, Specialized in Human Resource Management from Lorven Education Center, Bangalore University in the year 2004 and PG Diploma in English Language Teaching from Regional Institute of English in the year 2005. Having the passion towards professional social work, he worked with her mentor Dr. Hemalatha & Prof H.M. Marulasiddiah, and started first time in India the dedicated Journal for Professional Social Work. Knowing the scarcity of literature in social work, he started organisation *Nirathanka* which produced a large good number of books and e_literature in English and Kannada to facilitate the social work students and academicians. The social work journal has attracted many social work educators and practitioners. Many other academicians and practitioners extended support to him. He has a commitment to bring social work literature at low cost for students and has so far published two dozen books, e literature, blog, students help portal as well as is organing weekend HR classes besides career cancelling and helping students in seeking employment in various agencies and industries.**

**He has established a good network with social work educational institutions, employment agencies, social work organisations, professional social workers and human resource management professionals with 8000 members. He is extensively using through digital technology to bring people closer and providing low cost services to different stakeholders especially social work students. Recently, he has established Niratanka Institute of Social Work and Social Sciences (NISWASS) and intends to develop cadre of social workers who can bring change in society. He has a vision to create a strong platform to bring all the professional social workers working in the various fields at one place to discuss about the importance of professionals social work in their respective fields.**

**NAPSWI, at the 7th Indian Social Work Congress 2019 held at Department of Social Work Lucknow confers the NAPSWI Young Achiever Award to you Sir. This honour is conferred to a young Social Work Professional who has a positive vision, innovative ideas and outstanding contribution to social work profession.**
**The award has been conferred on the 11th day of October, 2019.**

**With Gratitude and Sincerity**

Prof Sanjai Bhatt
President, NAPSWI

Prof Suresh Pathare
Secretary, NAPSWI

# Awards & Certificates Recieved by Ramesha M.H.


NATIONAL ASSOCIATION OF PROFESSIONAL SOCIAL WORKERS IN INDIA

NAPSWI Young Achiever Award-2019

for outstanding contribution to promote social work profession

is conferred to

Sh. Ramesha M H

(Founder Director, Nirathanka, Bengaluru)

on the occasion of

7th Indian Social Work Congress 2019

held on October 11-13, 2019 at

Department of Social Work

University of Lucknow

Prof Sanjai Bhatt

President, NAPSWI

Prof Suresh Pathare

Secretary, NAPSWI


Bengaluru Youth Festival

BENGALURU YOUTH AWARD

Presented to

RAMESHA .MH

The Bengaluru Youth Award is conferred to the Youth of Bengaluru in recognition of their outstanding achievements in various categories.

12th - 14th August 2014 | Sree Kanteerava Indoor Stadium, Bengaluru

Sagar Sathish

Organising Secretary

N.L. Narendra Babu

Chairman

A Project of

Supported by

Govt. of Karnataka Dept. of Youth Empowerment & Sports

THE JGI GROUP

B.PAC Let's Be Better

In Association with


02NRAS3025

A40-A-M3-NR-20

ಬೆಂಗಳೂರು ವಿಶ್ವವಿದ್ಯಾಲಯ

Bangalore University

FOR QUALITY & EXCELLENCE IN HIGHER EDUCATION

Accredited by NAAC

ಬೆಂಗಳೂರು ವಿಶ್ವವಿದ್ಯಾಲಯದ ಕುಲಾಧಿಪತಿ, ಸಹಕುಲಾಧಿಪತಿ

*We, the Chancellor, the Pro-Chancellor, the Vice-Chancellor*

ಕುಲಪತಿ, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ ನಾವು

*the members of the Syndicate & Academic Council*

Certify that

*Ramesha M H* ಅವರು

ಯಥಾಯೋಗ್ಯವಾಗಿ ಈಗಾಗಲೇ ಪ್ರವೇಶ ಪಡೆದಿರುವರೆಂದು ದೃಢೀಕರಿಸುತ್ತಾ,

*has been duly admitted to the Degree of*

ಮಾಸ್ಟರ್ ಆಫ್ ಸೋಸಿಯಲ್ ವರ್ಕ್

Master of Social Work

ಪದವಿಗೆ ಅಗತ್ಯವಾದ ಅರ್ಹತೆಗಳನ್ನುಳ್ಳವರೆಂದು ಪರಿಗಣಿತವಾಗಿರುವ ಕಾರಣ

*in recognition of the fulfilment of requirements*

ಮೇಲೆ ಕಾಣಿಸಿದ ಪದವಿಗೆ ಅವರನ್ನು ಅಂಗೀಕರಿಸಲಾಗಿದೆ. ಈ ಪದವಿಯ ವಿವರಗಳು ಹೀಗಿವೆ

*for the said degree as indicated below*

ಪರೀಕ್ಷೆಯ ವರ್ಷ: *Year of Examination:* June 2004

ಪಡೆದ ವರ್ಗ : *Class:* First

ವಿಶ್ವವಿದ್ಯಾಲಯದ ಅಧಿಕಾರ ಮುದ್ರೆಯೊಡನೆ ನೀಡಲಾಗಿದೆ

*Given under the seal of the University*

ಬೆಂಗಳೂರು *Bangalore:*

ದಿನಾಂಕ *Date:* 27.01.2005

ಕುಲಪತಿ *Vice-Chancellor*


B.PAC Let's Be Better

B.PAC B.CLIP

CIVIC LEADERSHIP INCUBATOR PROGRAM

Let's Govern Better

KNOWLEDGE PARTNER TAKSHASHILA INSTITUTION

ಪ್ರಮಾಣ ಪತ್ರ

ಶ್ರೀ ರಮೇಶ್.ಎಂ.ಹೆಚ್.

ಬಿ.ಪ್ಯಾಕ್ ನಾಗರಿಕ ನಾಯಕತ್ವ ತರಬೇತಿ (ಬಿ.ಕ್ಲಿಪ್) ಕಾರ್ಯಕ್ರಮವನ್ನು 2014-15 ರಲ್ಲಿ ಭಾಗವಹಿಸಿದ್ದಾರೆ ಎಂದು ಬಿ.ಪ್ಯಾಕ್ ಪರಿಗಣಿಸುತ್ತದೆ.

*This is to Certify*

Sri *Ramesh M H* has participated in

B.PAC Civic Leadership Incubator Program (B.CLIP)

in Batch 1 during 2014-15

Kiran Mazumdar-Shaw

President, B.PAC

Revathy Ashok

Managing Trustee & CEO, B.PAC

Ramesha Niratanka rameshaniratanka www.niratanka.org, www.nirutapublications.org

# RAMESHA M.H. MSW, PGDELT



## BIO-DATA

**Name** : **Ramesha M.H.**

**Father Name** : Hanumaiah

**Caste** : Hindu (Vokkaliga)

**Address** : No. 326, 2nd Floor, Opp. Canara Bank, Near Dr. AIT College, Kengunte, Mallathahalli, Bengaluru - 560 056. Mobile-9980066890
E-mail: ramesha.mh@gmail.com
Website: www.niratanka.org, www.nirutapublications.org

**Academic Background & Certifications** :

- Completed **Master of Social Work (MSW)**, Specialised in Human Resource Management from Bangalore University in the year 2004.
- Qualified **Karnataka State Eligibility Test (KSET)** for Lecturer / Assistant Professorship held on December 2016.
- Completed B.Pac programme through Bangalore Political Action Committee, Bengaluru in the year 2014.
- Completed Training Course in Book Publishing through National Book Trust, Ministry of Human Resource Development, Government of India in the year 2012.
- Completed the Post Graduate Diploma in English Language Teaching from Regional Institute of English, Bengaluru in the year 2005.
- Completed BA in Optional Kannada, History, Economics from National College, Basavanagudi, Bengaluru in the year 2002.

**Awards** :

- **National Association of Professional Social Workers in India (NAPSWI)** "Young Achievers Awardee-2019".
- Received the Bangalore Youth Award in Bangalore Youth Festival Event in the year August 2014.
- Received the award of Dr. Marthuvkudi R Venkatamma's memorial prize for proficiency in highest in Sociology from National College, Bengaluru in the year 2003.

**Association with Professional Bodies :**

- Life member of Kannada Sahitya Parishath, Bengaluru.
- Life Member of National Institute of Personnel Management, Karnataka Chapter.
- Life Member of Karnataka Association of Professional Social Workers, Bengaluru and served as Secretary for a few years for the Association.
- Secretary, Bengaluru Universities Social Work Alumni Association
- Life Member NHRD, Bangalore Chapter

**Working Experience :**

- Currently working as a Managing Director in M&HR Solutions Private Limited.
- Taken the full time role in the NGO of Nirathanka in the year 2010 to provide the services for elderly men and women, education, health care and skill development trainings for youth.
- Worked as Assistant Professor for Social Work Department of Anupama College, Affiliated to Bangalore University, Department of Social Work during 2008 & 2009.
- Worked as Executive – Human Resources in Kemwell Pharma in the year 2007.

**Major Achievements :**

- Started the NGO of Nirathanka in the year 2007 to provide the Social Work support for the elderly people & youth through health care, food security, education and skill development programmes. Completed the journey of 16 years successfully by creating a smile in many lives.
- Started the Bi-Lingual Journal named "Social Work Foot Prints / Samaja Karyada Hejjegalu" of Social Work in English & Kannada language through Nirathanka NGO in the year 2010 for the first time in Karnataka and published many special articles upto 2018. Facilitating many professional social workers, students, academicians and others to publish their papers in this journal.
- Started the Niruta Publications in the year 2012 with an intention of publishing the books in the field of Social Work, Human Resource Management and Literature. Successfully published about 150 books as on March 2023.

- Published many books of the International Renowned Professional Social Workers such as Prof. Shankar Pathak, Dr. T.K. Nair, Dr. Venkat Pulla and Prof. Marulasiddaiah through Niruta Publications.
- Conceptualised and started "The State Level Human Resource Professionals Kannada Conference" for the first time in Karnataka in the year 2017 with a motto of bringing all professional social workers & HR Professionals in the Karnataka under one roof and create an opportunity for young Professional Social Workers & HR Professionals. Successfully completed 3 conferences as on year 2020.
- Has been organising monthly / quarterly interactive sessions with Professional Social Workers to discuss about the recent development and contemporary issues.
- Extending the support for Social Work Colleges to connect with Industries for orientation visits, fieldwork, project works and so on.

**Achievements as Author** :

- Editor of Social Work Foot Prints journal from year 2010 to 2018.
- Editor of the book "Karnataka NGO's Directory" in the year 2010.
- Editor of the book "Samajakaryada Sadhakaru" in the year 2011.
- Author of the book "Prapancha Parivarthaneya Marga" in the year 2011.
- Editor of the book "UGC Net Book – Social Work" in the year 2014.
- Co-authored the book "Vyakthigatha Samajakaryada Parichaya (Introduction of Social Case Work)" in Kannada in the year 2018.

**Personal Inputs** :

- Born on July 22, 1981 in Bengaluru in the family of agriculture background.

Date: 30-05-2023
Place: Bengaluru

**(Ramesha M.H.)**

# Nirathanka

Nirathanka is a Non-Governmental Organization with a registered office in Bangalore. Formed in 2007, Nirathanka has expanded its service areas to various social sectors such as education, health care, food security and livelihood training. Has brought out the journal "Social Work Foot Prints" for the past ten years and has published and contributed several books to the field of social work. It is helping rural students by providing free training programs and providing them with employment in various organizations. Nirathanka has been assigning expert external members to company internal committees under PoSH law for over 50 reputed organizations across India for the past ten years and providing training to company employees by skilled PoSH trainers.

**For more details: www.niratanka.org**


ಪ್ರಜಾವಾಣಿ

ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

ಶುಕ್ರವಾರ, 30ನೇ ಏಪ್ರಿಲ್, 2010




ನಿರಾತಂಕ ಸ್ವಯಂ ಸೇವಾ ಸಂಸ್ಥೆಯ ಮುದ್ದಯ್ಯನಪಾಳ್ಯ ಬಳಿ ನೂತನವಾಗಿ ಆರಂಭಿಸಿರುವ ವೃದ್ಧಾಶ್ರಮವನ್ನು ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಉದ್ಘಾಟಿಸಿದರು. ಬೆಂಗಳೂರು ವಿ.ವಿ. ನಿವೃತ್ತ ಪ್ರಾಧ್ಯಾಪಕ ಎಚ್.ಎಂ. ಮರುಳಸಿದ್ಧಯ್ಯ, ವಾಯ್ಸ್ ಫಾರ್ ಇಂಡಿಯಾ ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿ ಸುರೇಶ್ ತೋಟ ಇತರರು ಚಿತ್ರದಲ್ಲಿದ್ದಾರೆ.

**ರಾಜರಾಜೇಶ್ವರಿನಗರ:** 'ಯುವ ಜನತೆ ಹಿರಿಯರನ್ನು ಅಗೌರವದಿಂದ ಕಾಣುತ್ತಿರುವುದರಿಂದ ಹಿರಿಯ ನಾಗರಿಕರಿಗೆ ಆಶ್ರಯ ನೀಡಲು ವೃದ್ಧಾಶ್ರಮಗಳು ಸ್ಥಾಪನೆಯಾಗುತ್ತಿರುವುದು ದುರದೃಷ್ಟಕರ' ಎಂದು ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಹೇಳಿದರು.

ಮುದ್ದಯ್ಯನಪಾಳ್ಯದಲ್ಲಿ ನಿರಾತಂಕ ಸ್ವಯಂ ಸೇವಾ ಸಂಸ್ಥೆ ನೂತನವಾಗಿ ಪ್ರಾರಂಭಿಸಿರುವ ವೃದ್ಧಾಶ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ಚೆನ್ನಾಗಿರಬೇಕು, ಉತ್ತಮ ಶಿಕ್ಷಣ ನೀಡಿ ಒಳ್ಳೆಯ ನೌಕರಿ ಕೊಡಿಸಬೇಕು ಎಂದು ತಂದೆ–ತಾಯಿ ಬಯಸುತ್ತಾರೆ. ಅವರಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಡುತ್ತಾರೆ. ಆದರೆ ಮಕ್ಕಳು ಹಿರಿಯರನ್ನು ದೂರ ಮಾಡುವುದು ಅಪಾಯಕಾರಿ ಬೆಳವಣಿಗೆ ಎಂದು ಕಳವಳ ವ್ಯಕ್ತಪಡಿಸಿದರು.

ಉಚಿತ ಆರೋಗ್ಯ ಶಿಬಿರವನ್ನು ಉದ್ಘಾಟಿಸಿದ ನಗರಸಭೆ ಮಾಜಿ ಅಧ್ಯಕ್ಷ ಹನುಮಂತರಾಯಪ್ಪ ಮಾತನಾಡಿ, 'ವೃದ್ಧಾಶ್ರಮಗಳು ನಾಯಿಕೊಡೆಗಳಂತೆ ಪ್ರತಿ ಬಡಾವಣೆಗಳಲ್ಲಿ ತಲೆಯೆತ್ತುತ್ತಿರುವುದು ಸರಿಯಲ್ಲ. ಇಂದು ಹಿರಿಯರನ್ನು ನಿರ್ಲಕ್ಷಿಸುವ ಯುವ ಜನತೆ ಮುಂದೊಂದು ದಿನ ವೃದ್ಧಾಪ್ಯ ಆವರಿಸಿದಾಗ ಅವರು ಇದೇ ನೋವನ್ನು ಅನುಭವಿಸುತ್ತಾರೆ' ಎಂದರು.

ಬೆಂಗಳೂರು ವಿ.ವಿ. ನಿವೃತ್ತ ಪ್ರಾಧ್ಯಾಪಕ ಡಾ. ಎಚ್.ಎಂ. ಮರುಳಸಿದ್ಧಯ್ಯ, ಹೇರೋಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಾದಪ್ಪ, ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಡಾ. ಬಿ. ಕೃಷ್ಣ, 'ವಾಯ್ಸ್ ಫಾರ್ ಇಂಡಿಯಾ' ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿ ಸುರೇಶ್ ತೋಟ, ನಿರಾತಂಕ ಸ್ವಯಂ ಸೇವಾ ಸಂಘಟಕರಾದ ಎಂ.ಎಚ್. ರಮೇಶ್, ಸಿ.ಆರ್. ಪ್ರಸನ್ನ ಕುಮಾರ್ ಮತ್ತಿತರರು ಹಾಜರಿದ್ದರು.

# State Level Human Resource Professionals Kannada Conference Photographs
























# Niruta Publications

## Book launch events organized by Ramesha M.H.
















# Books written by Ramesha M.H. as an Author and Editor





NIRUTA Publications


## Niruta Publications

# Press Reports about
# Nirathanka and Niruta Publications

ಪ್ರಜಾವಾಹಿನಿ

## ವಿದೇಶಿ ಕಂಪನಿಗಳಲ್ಲಿ ಕನ್ನಡ ದೀಪ ಬೆಳಗುವ ಕಾರ್ಯ ಶ್ಲಾಘನೀಯ

• ಪ್ರಜಾವಾಹಿನಿ–ಯಶವಂತಪುರ



ಬಹು ರಾಷ್ಟ್ರೀಯ ಕಂಪನಿಗಳು ಕರ್ನಾಟಕದಲ್ಲಿ ಕನ್ನಡಿಗರನ್ನೇ ಹೀನಾಯ ಸ್ಥಿತಿಯಲ್ಲಿ ನೋಡುತ್ತಿರುವುದು ವಿಷಾದಕರ ವಿಷಯವಾಗಿದ್ದು, ಕನ್ನಡಿಗರು ಒಂದಾಗಿ ಕೈಗಾರಿಕೆ, ಕಾರ್ಖಾನೆಗಳಲ್ಲಿ ಕನ್ನಡ ಭಾಷೆಯನ್ನು ಬಳಕೆಗೆ ತರುವ ಮೂಲಕ, ಜೊತೆಯಾಗಿ ಕೆಲಸ ಮಾಡಿದಾಗ ಕನ್ನಡ ಭಾಷೆ ಉಳಿಸಲು ಸಾಧ್ಯ ಎಂದು ಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಅವರು ಹೇಳಿದರು.

ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೃತ್ತಿ ನಿರತರ ನೋಂದಾಯಿತ ನಿರಾತಂಕ ಸ್ವಯಂ ಸೇವಾ ಸಂಸ್ಥೆಯು ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೆಂಗುಂಟೆಯಲ್ಲಿ ಹಮ್ಮಿಕೊಂಡಿದ್ದ 6ನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ಕನ್ನಡ ಸಮ್ಮೇಳನದಲ್ಲಿ ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಿ ಮಾತನಾಡಿ ನಿರಾತಂಕ ಸಂಸ್ಥೆಯು ಕಾರ್ಖಾನೆ ಮತ್ತು ಬಹು ರಾಷ್ಟ್ರೀಯ ಸಂಸ್ಥೆಗಳಲ್ಲಿ ಕನ್ನಡದ ದೀಪ ಹಚ್ಚುವ ಮೂಲಕ ತಾಯಿ ಭುವನೇಶ್ವರಿಗೆ ಗೌರವ ಸಲ್ಲಿಸುತ್ತಿರುವುದು ಕನ್ನಡ ಉಳಿವಿಗೆ, ಬೆಳವಣಿಗೆಗೆ ಸಹಕಾರಿಯಾಗಿದೆ ಎಂದರು.

ಸಂಪನ್ಮೂಲ ಕ್ಷೇತ್ರದ ವೃತ್ತಿ ನಿರತರು ಪಂಚತಾರ ಹೋಟೆಲ್‌ಗಳಲ್ಲಿ, ಬಹು ರಾಷ್ಟ್ರೀಯ ಕಂಪನಿಗಳಲ್ಲಿ ಹಚ್ಚೇವು ಕನ್ನಡದ ದೀಪ ಕರುನಾಡ ದೀಪ ಹಾಡನ್ನು ಹಾಡುವ ಮೂಲಕ ಕವಿಗಳು ರಚಿಸಿದ ಹಾಡನ್ನು ವಿದೇಶಿಗರು ಕೇಳುವಂತೆ ಮಾಡಿದ ಕಾರ್ಯ ಶ್ಲಾಘನೀಯ ಎಂದು ಸಮ್ಮೇಳನದ ಅಧ್ಯಕ್ಷ ಕವಿ ಎಚ್.ಎಸ್. ವೆಂಕಟೇಶ್ ಮೂರ್ತಿ ಮುಕ್ತ ಕಂಠದಿಂದ ಹೇಳಿದರು.

ಪ್ರತಿದಿನ ಕನ್ನಡವನ್ನು, ಕನ್ನಡ ನಾಡಿನ ಗಂಧವನ್ನು ಅರ್ಥ ಮಾಡಿಕೊಂಡು, ಅನ್ಯ ಭಾಷಿಗರು ಕನ್ನಡ ಭಾಷೆ ಮಾತನಾಡಬೇಕು. ಈ ನೆಲದ ನೆಲ, ಜಲ ವನ್ನು ಸವಿಯುವ, ಬದುಕನ್ನು ಕಟ್ಟಿಕೊಂಡಿರುವ ಎಲ್ಲರೂ ನಾನೂ ಕನ್ನಡಿಗ ಎಂದು ಹೇಳುವ ವಾತಾವರಣ ಸೃಷ್ಟಿಯಾಗಬೇಕಾಗಿದೆ ಎಂದರು.

ಉಚ್ಚ ನ್ಯಾಯಾಲಯದ ಹಿರಿಯ ವಕೀಲ ಎಚ್.ಎಸ್.ಮೂರ್ತಿ ಪ್ರಸ್ತುತ ಕಾರ್ಮಿಕ ಕಾನೂನುಗಳು ಮತ್ತು ಮುಂಬರುವ ಕಾರ್ಮಿಕ ಸಂಹಿತೆಗಳು ಪುಸ್ತಕವನ್ನು ಬಿಡುಗಡೆ ಮಾಡಿ ಮಾತನಾಡಿ, ಎಲ್ಲಾ ಕಂಪನಿಗಳಲ್ಲಿ ಉನ್ನತ ಹುದ್ದೆಗಳಲ್ಲಿ ಕನ್ನಡಿಗರು ಬೆಳೆಯಬೇಕು. ಹೆಚ್ಚಾಗಿ ಮಾನವ ಸಂಪನ್ಮೂಲ ವಿಷಯದಲ್ಲಿ ಪರಿಣಿತರಾಗಿ, ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಮೂಲಕ ಕಾರ್ಮಿಕರ ಭವಿಷ್ಯಕ್ಕೆ ದಾರಿ ದೀಪವಾಗಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ನಿರಾತಂಕ ಸೇವಾಸಂಸ್ಥೆಯ ಎಂ.ಎಚ್. ರಮೇಶ್, ಜಿ.ಎನ್.ಶೇಖರ್, ಬಿ.ಕೆ.ಕೆಂಪೇಗೌಡ, ಆರ್.ಎಂ.ಪ್ರಕಾಶ್, ಜಯರಾಮ ರಾಮಯ್ಯ, ರಾಜ್ಯೋತ್ಸವ ಪ್ರಶಸ್ತಿ ವಿಜೇತ ಸುಧಾ ಬರಗೂರು ಮಾತನಾಡಿದರು.

ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಸಾಧನೆಗೈದ ಡಾ. ಎಸ್.ನಾಗೇಂದ್ರ, ವಿ.ಅಶ್ವಥ ರಾಮಯ್ಯ, ಎ.ಯು.ದಿನೇಶ್, ರವಿ, ಸತ್ಯಕುಮಾರ್ ಅವರಿಗೆ ಮಾನವ ಸಂಪನ್ಮೂಲ ಕ್ಷೇತ್ರದ ಸಾಧಕ ಪ್ರಶಸ್ತಿ, ಎಸ್.ಎನ್. ಮೋಹನ್ ಕುಮಾರ್, ಅಶೋಕ್ ವಿಟ್ಲ, ಭೀಮನಾಯ್ಕ್, ಮಹಾಂತೇಶ್.ಎಸ್. ಸಾವನೂರ್, ಕೆ.ಆರ್.ಸೌಮಶ್ರೀ ಅವರಿಗೆ ಕಿರಿಯ ಸಾಧಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರಜಾವಾಹಿನಿ, ದಿನಾಂಕ: **17–11–2022**

---

## ದಿನೇಶ್ ಅತ್ಯಾಡಿ ಅವರಿಗೆ ರಾಜ್ಯಮಟ್ಟದ ಮಾನವ ಸಂಪನ್ಮೂಲ ಪ್ರತಿಭಾ ಪುರಸ್ಕಾರ




ನಿರಾತಂಕ ಸಂಸ್ಥೆ ಬೆಂಗಳೂರು ನ.12 ರಂದು ಬೆಂಗಳೂರಿನಲ್ಲಿ ಆಯೋಜಿಸಿದ್ದ 6ನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನದಲ್ಲಿ ಮಾನವ ಸಂಪನ್ಮೂಲ ಕ್ಷೇತ್ರದ ಹಿರಿಯ ಸಾಧಕ ಪ್ರಶಸ್ತಿಯನ್ನು ದಿನೇಶ್ ಅತ್ಯಾಡಿಯವರಿಗೆ ನೀಡಿ ಸನ್ಮಾನಿಸಲಾಯಿತು.

ಮಾನವ ಸಂಪನ್ಮೂಲ ಕ್ಷೇತ್ರಕ್ಕೆ ಅವರ ಗಣನೀಯ ಸೇವೆ, ಔದ್ಯಮಿಕ ಸಂಸ್ಥೆಗಳ ಅಭಿವೃದ್ಧಿ ಮತ್ತು ಕಾರ್ಮಿಕರ ಕಲ್ಯಾಣಕ್ಕೆ ಅವರು ನೀಡಿದ ಕೊಡುಗೆಗಳನ್ನು ಗುರುತಿಸಿ ನೀಡಿದ ಈ ಪ್ರಶಸ್ತಿಯನ್ನು, ಹೆಸರಾಂತ ಸಿನೆಮಾ ನಿರ್ದೇಶಕರಾದ ಟಿ.ಎಸ್. ನಾಗಾಭರಣರವರು ನೀಡಿ ಗೌರವಿಸಿದರು. ಸಮ್ಮೇಳನದ ಅಧ್ಯಕ್ಷತೆ ಹಿರಿಯ ಕವಿ ಪ್ರೊ. ಎಚ್.ಎಸ್. ವೆಂಕಟೇಶಮೂರ್ತಿ ವಹಿಸಿದ್ದು, ಕರ್ನಾಟಕ ಹೈ ಕೋರ್ಟ್‌ನ ಹಿರಿಯ ನ್ಯಾಯವಾದಿ ಶ್ರೀ ಎಸ್.ಎನ್. ಮೂರ್ತಿ, ನಿರಾತಂಕ ಸಂಸ್ಥೆಯ ಟ್ರಸ್ಟೀ ರಮೇಶ ಎಂ.ಎಚ್. ರವರ ಉಪಸ್ಥಿತಿಯಲ್ಲಿ ಪ್ರಧಾನ ಮಾಡಲಾಯಿತು.

ದಿನೇಶ್ ರವರು ಅತ್ಯಾಡಿ ಉತ್ತಯ್ಯ ಗೌಡ ಹಾಗೂ ಸುಂದರಿಯವರ ಪುತ್ರರಾಗಿದ್ದು, ಪ್ರಸ್ತುತ ಬೆಂಗಳೂರಿನಲ್ಲಿರುವ ಜರ್ಮನ್ ಬಹುರಾಷ್ಟ್ರೀಯ ಸಂಸ್ಥೆ ರಿಟ್ಟೆಲ್ ಇಂಡಿಯಾದಲ್ಲಿ ಮಾನವ ಸಂಪನ್ಮೂಲ ಮತ್ತು ಆಡಳಿತ ವಿಭಾಗಗಳ ನಿರ್ದೇಶಕರಾಗಿದ್ದಾರೆ. ಮೂಲತಃ ನಾಲ್ಕೂರು ಗ್ರಾಮದ ನಡುಗಲ್ಲಿನವರಾದ ಇವರು, ಪ್ರಸ್ತುತ ಯೇನೆಕಲ್ಲು ಗ್ರಾಮದ ಮಾಣಿಬೈಲಿನಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡು ವಾಸಿಸುತ್ತಿದ್ದಾರೆ.

ಸುದ್ದಿ ಬಿಡುಗಡೆ, ಸುಳ್ಯ, ದಿನಾಂಕ: **14–11–2022**

# Press Reports about Nirathanka and Niruta Publications

ಕನ್ನಡಪ್ರಭ

## ಕಿರ್ಲೋಸ್ಕರ್ ಫೆರಸ್ ಕಾರ್ಖಾನೆಗೆ ಸಿಎಸ್‌ಆರ್ ಎಕ್ಸ್‌ಲೆನ್ಸ್ ಪ್ರಶಸ್ತಿ

**ಕನ್ನಡಪ್ರಭ ವಾರ್ತೆ ಕೊಪ್ಪಳ**

ಇಲ್ಲಿನ ಕಿರ್ಲೋಸ್ಕರ್ ಫೆರಸ್ ಕಾರ್ಖಾನೆಯು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಕ್ಷೇತ್ರದಲ್ಲಿ ಸಲ್ಲಿಸಿರುವ ಅತ್ಯುತ್ತಮ ಸೇವೆ ಗುರುತಿಸಿ ಸಿಎಸ್‌ಆರ್ ಎಕ್ಸ್‌ಲೆನ್ಸ್ ಪ್ರಶಸ್ತಿ ನೀಡಲಾಗಿದೆ. ಕಾರ್ಖಾನೆಯ ಮಾನವ ಸಂಪನ್ಮೂಲ ವಿಭಾಗದ ಕಾರ್ಯನಿರ್ವಾಹಕ ಉಪಾಧ್ಯಕ್ಷ ಪಿ. ನಾರಾಯಣ ಪ್ರಶಸ್ತಿಯನ್ನು ಸ್ವೀಕರಿಸಿದರು.

ಬೆಂಗಳೂರಿನ ಹೋಟೆಲ್ ಚಾನ್ಸರಿ ಪೆವಿಲಿಯನ್‌ನಲ್ಲಿ ನಿರಾತಂಕ ಸಂಸ್ಥೆಯು 6ನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಸಮ್ಮೇಳನದಲ್ಲಿ ಅಧ್ಯಕ್ಷರಾಗಿ ಪ್ರೊ. ಎಚ್.ಎಸ್. ವೆಂಕಟೇಶಮೂರ್ತಿ, ಮುಖ್ಯ ಅತಿಥಿಗಳಾಗಿ ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ, ಹಿರಿಯ ವಕೀಲರಾದ ಎಸ್.ಎನ್. ಮೂರ್ತಿ ಭಾಗವಹಿಸಿದ್ದರು.

ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಅಪಾರ ಅನುಭವ ಇರುವ ಹಿರಿಯ ಮಾನವ ಸಂಪನ್ಮೂಲ ಕಾರ್ಯ ನಿರ್ವಾಹಕರನ್ನು ಸಂದರ್ಶಿಸಿ, ಅವರ ಅನುಭವಗಳನ್ನು ಲೀಡರ್ಸ್ ಟಾಕ್ ಎಂಬ ಪುಸ್ತಕದಲ್ಲಿ ಪ್ರಕಟಿಸಿದ್ದು, ಅದನ್ನು ಸಮಾರಂಭದಲ್ಲಿ ಬಿಡುಗಡೆ ಮಾಡಲಾಯಿತು.



**ಕೊಪ್ಪಳ ಕಿರ್ಲೋಸ್ಕರ್ ಕಂಪನಿಗೆ ಸಾಂಸ್ಥಿಕ ಜವಾಬ್ದಾರಿಗೆ ಸಿಎಸ್‌ಆರ್ ಎಕ್ಸಲೆನ್ಸ್ ಪ್ರಶಸ್ತಿ ಪ್ರಧಾನ ಮಾಡಲಾಯಿತು.**

ಕಿರ್ಲೋಸ್ಕರ್ ಫೆರಸ್ ಕಾರ್ಖಾನೆಯ ಮಾನವ ಸಂಪನ್ಮೂಲ ವಿಭಾಗದ ಕಾರ್ಯನಿರ್ವಾಹಕ ಉಪಾಧ್ಯಕ್ಷ ಪಿ. ನಾರಾಯಣ ಅವರನ್ನು ಸಂದರ್ಶಿಸಿದ್ದು, ಹಂಚಿಕೊಂಡ ಅನುಭವವನ್ನು ಈ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಪಿ. ನಾರಾಯಣ ಅವರು, ಕಿರ್ಲೋಸ್ಕರ್ ಕಾರ್ಖಾನೆಯು ಕೇವಲ ಉತ್ಪಾದನೆಗೆ ಸೀಮಿತಗೊಳಿಸದೆ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿಭಾಯಿಸಿಕೊಂಡು ಬರುತ್ತಿದೆ. ಇನ್ನೂ ಈ ದಿಶೆಯಲ್ಲಿ ಹೆಚ್ಚಿನ ಚಟುವಟಿಕೆಗಳನ್ನು ಕೈಗೊಳ್ಳಲಾಗುವುದು ಎಂದರು.

**ಕನ್ನಡಪ್ರಭ, ಕೊಪ್ಪಳ, ದಿನಾಂಕ: 14–11–2022**

---

ಈ ಸಂಜೆ

## ಕನ್ನಡ ಭಾಷೆಯನ್ನು ಎಲ್ಲರೂ ಗೌರವಿಸೋಣ

ಬೆಂಗಳೂರು, ನ.12 – ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೆಲವು ವೃತ್ತಿನಿರತರು ಜೊತೆಗೂಡಿ, ನೋಂದಾಯಿತ ಸ್ವಯಂ ಸೇವಾ ಸಂಸ್ಥೆಯು ನಗರದಲ್ಲಿ ಆಯೋಜಿಸಿದ 6ನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನ ಯಶಸ್ವಿಯಾಗಿ ನಡೆಯಿತು.



ಸಮ್ಮೇಳನದ ಅಧ್ಯಕ್ಷ ಪ್ರೊ. ಹೆಚ್.ಎಸ್. ವೆಂಕಟೇಶಮೂರ್ತಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಕಡಿಮೆಯಾಗುತ್ತಿದೆ. ನಾಡು–ನುಡಿ ಬಗ್ಗೆ ಅಭಿಮಾನ, ಗೌರವವಿಟ್ಟು ಈ ಸಮ್ಮೇಳನವನ್ನು ಪಂಚತಾರಾ ಹೋಟೆಲ್‌ನಲ್ಲಿ ಆಯೋಜಿಸಿದ್ದು ಹೆಮ್ಮೆಯ ವಿಚಾರ. ಹಚ್ಚೇವು ಕನ್ನಡದ ದೀಪದ ಮೂಲಕ ಪ್ರಾರಂಭವಾದ ಈ ಕಾರ್ಯಕ್ರಮ ನಿಜಕ್ಕೂ ಶ್ಲಾಘನೀಯ ಎಂದರು.

ಪ್ರತಿಯೊಬ್ಬರು ಕನ್ನಡವನ್ನು, ಕನ್ನಡ ನಾಡಿನ ಗಂಧವನ್ನು ಅರ್ಥ ಮಾಡಿಕೊಳ್ಳಬೇಕು. ಉತ್ತಮ ವಿಚಾರಗಳನ್ನು ಕನ್ನಡದಲ್ಲೇ ತಿಳಿಸಿದಾಗ ಸುಲಭವಾಗಿ ಅರ್ಥವಾಗುತ್ತದೆ ಎಂದರು.

ನಿರ್ಮಾಪಕ ಟಿ.ಎಸ್. ನಾಗಾಭರಣ ಮಾತನಾಡಿ, ಸಂಸ್ಥೆಗಳಲ್ಲಿ ಕನ್ನಡವನ್ನು ಉಳಿಸುವುದು ಪ್ರತಿಯೊಬ್ಬ ಕನ್ನಡಿಗನ ಜವಾಬ್ದಾರಿ ಆಗಲೇಬೇಕು. ಈ ಒಂದು ಕನ್ನಡ ಸಮ್ಮೇಳನ ಕನ್ನಡಿಗರು ಸೇರಿ ಮಾಡುತ್ತಿರುವುದು ನಿಜವಾಗಲೂ ಒಳ್ಳೆಯ ವಿಚಾರ ಎಂದರು.

ವಕೀಲರಾದ ಎಸ್.ಎನ್. ಮೂರ್ತಿ ಮಾತನಾಡಿ, ಇಂದು ಆರನೇ ಕನ್ನಡ ಮಾನವ ಸಂಪನ್ಮೂಲ ಸಮ್ಮೇಳನಕ್ಕೆ ಆಗಮಿಸಿ, ಮಾತನಾಡಿದ್ದಾರೆ. ಇವರು ಕಂಪನಿಗಳಲ್ಲಿ ಹೆಚ್ಚಾಗಿ ಕನ್ನಡಿಗರ ನೇಮಕಕ್ಕೆ ಪ್ರೋತ್ಸಾಹಿಸಿದ್ದಾರೆ ಹಾಗೂ ಹೆಚ್ಚು ಹೆಚ್ಚು ಕಂಪನಿಗಳಲ್ಲಿ ಉನ್ನತ ಹುದ್ದೆಗಳಲ್ಲಿ ಕನ್ನಡಿಗರು ಬೆಳೆಯಬೇಕು ಎಂದು ಆಶಿಸಿದರು.

ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಅಗಾಧ ಸಾಧನೆಗೈದ ಡಾ. ಎಸ್. ನಾಗೇಂದ್ರ, ವಿ. ಅಶ್ವತ್ಥ ರಾಮಯ್ಯ, ದಿನೇಶ್ ಎ.ಯು. ಮತ್ತು ರವಿ ಸತ್ಯಕುಮಾರ್ ರವರಿಗೆ ಮಾನವ ಸಂಪನ್ಮೂಲ ಕ್ಷೇತ್ರದ ಹಿರಿಯ ಸಾಧಕ ಪ್ರಶಸ್ತಿ 2022 ಅನ್ನು ನೀಡಿ ಸನ್ಮಾನಿಸಲಾಯಿತು.

ಸಮ್ಮೇಳನದ ಸಂಸ್ಥಾಪನಾ ಸಮಿತಿಯ ಸದಸ್ಯರಾದ ರಮೇಶ ಎಂ.ಎಚ್., ಶೇಖರ್ ಜಿ.ಎನ್., ಕೆಂಪೇಗೌಡ ಬಿ.ಕೆ., ಪ್ರಕಾಶ್ ಆರ್.ಎಂ., ಜಯರಾಮ್ ರಾಮಯ್ಯ ಹಾಜರಿದ್ದರು.

**ಈ ಸಂಜೆ, ದಿನಾಂಕ: 12–11–2022**

# Press Reports about
# Nirathanka and Niruta Publications

## ಇಂದು ಸಂಜೆ

# ಆರನೆಯ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನ–2022



ಬೆಂಗಳೂರು: ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೆಲವು ವೃತ್ತಿನಿರತರ ಜೊತೆಗೂಡಿ, ನೋಂದಾಯಿತ ನಿರಾತಂಕ ಸ್ವಯಂ ಸೇವಾ ಸಂಸ್ಥೆಯು ಆರನೆಯ ರಾಜ್ಯಮಟ್ಟದ ಮಾನವ ಸಂಪನ್ಮೂಲ ಕನ್ನಡ ಸಮ್ಮೇಳನ 2022 ಅನ್ನು 12ನೇ ನವೆಂಬರ್, 2022ರಂದು ಬೆಂಗಳೂರಿನ ರೆಸಿಡೆನ್ಸಿ ರಸ್ತೆಯಲ್ಲಿನ 'ದಿ ಚಾನ್ಸರಿ ಪೆವಿಲಿಯನ್' ಹೋಟೆಲ್‌ನಲ್ಲಿ ಆಯೋಜಿಸಲಾಯಿತು.

ಸಮ್ಮೇಳನದ ಅಧ್ಯಕ್ಷರಾಗಿ ಖ್ಯಾತ ಕವಿಗಳಾದ ಪ್ರೊ. ಹೆಚ್.ಎಸ್. ವೆಂಕಟೇಶಮೂರ್ತಿ, ಮುಖ್ಯ ಅತಿಥಿಗಳಾಗಿ ಹಿರಿಯ ರಂಗಕರ್ಮಿ ಮತ್ತು ಚಲನಚಿತ್ರ ನಿರ್ದೇಶಕರು ಮತ್ತು ನಿರ್ಮಾಪಕರಾದ ಶ್ರೀ ಟಿ.ಎಸ್. ನಾಗಾಭರಣ ಮತ್ತು ಕರ್ನಾಟಕ ಉಚ್ಚನ್ಯಾಯಾಲಯದ ಹಿರಿಯ ವಕೀಲರಾದ ಶ್ರೀ ಎಸ್.ಎನ್. ಮೂರ್ತಿರವರು ಆಗಮಿಸಿದ್ದರು ಮತ್ತು ಸಮ್ಮೇಳನದ ಸಂಸ್ಥಾಪನಾ ಸಮಿತಿಯ ಸದಸ್ಯರಾದ ರಮೇಶ ಎಂ.ಎಚ್., ಶೇಖರ್ ಜಿ.ಎನ್., ಕೆಂಪೇಗೌಡ ಬಿ.ಕೆ., ಪ್ರಕಾಶ್ ಆರ್.ಎಂ., ಜಯರಾಮ್ ರಾಮಯ್ಯ ಮುಂತಾದವರು ಹಾಜರಿದ್ದರು.

**ಇಂದು ಸಂಜೆ, 13 ನವೆಂಬರ್ 2022**

## ಪ್ರಜಾವಾಣಿ



ನಗರದ ಪ್ರತಿಷ್ಠಿತ ಹೋಟೆಲ್ ಒಂದರಲ್ಲಿ ಹಮ್ಮಿಕೊಂಡಿದ್ದ 6ನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನದಲ್ಲಿ ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಸನ್ಮಾನಿಸಿದರು. ಸಮ್ಮೇಳನದ ಅಧ್ಯಕ್ಷ ಕವಿ ಎಚ್.ಎಸ್. ವೆಂಕಟೇಶ ಮೂರ್ತಿ, ಹೈಕೋರ್ಟ್ ಹಿರಿಯ ವಕೀಲ ಎಸ್.ಎನ್. ಮೂರ್ತಿ, ನಿರಾತಂಕ ಸೇವಾ ಸಂಸ್ಥೆಯ ಎಂ.ಎಚ್. ರಮೇಶ ಮತ್ತಿತರರು ಇದ್ದಾರೆ.

ಪ್ರಜಾವಾಣಿ, ದಿನಾಂಕ: 26–11–2022, ಶನಿವಾರ

# Press Reports about
# Nirathanka and Niruta Publications

ಜನದನಿಯ ಸಾರಥಿ
**ವಾರ್ತಾ ಭಾರತಿ**

## ಸಮಾಜಕಾರ್ಯ ಸಾಹಿತ್ಯ ರಚನೆಯ ಕೊರತೆಯಿದೆ



### ಡಾ. ರೂತ್ ಮನೋರಮಾ

**ಬೆಂಗಳೂರು, ಫೆ.20:** ಪ್ರಸಕ್ತ ದಿನಗಳಲ್ಲಿ ಸಮಾಜಕಾರ್ಯ ವಿಷಯದಲ್ಲಿ ಸಾಕಷ್ಟು ಸಾಹಿತ್ಯವಿಲ್ಲದಿರುವುದು ಬಹುದೊಡ್ಡ ಸಮಸ್ಯೆಯೇ ಆಗಿದೆ ಎಂದು ಮಹಿಳಾಪರ ಚಳವಳಿಗಾರ್ತಿ, ರೈಟ್ ಲೈವ್‌ಲಿಹುಡ್ ಪ್ರಶಸ್ತಿ ಪುರಸ್ಕೃತೆ ಡಾ. ರೂತ್ ಮನೋರಮಾ ಹೇಳಿದ್ದಾರೆ.

ರವಿವಾರ ನಗರದ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ನಿರುತ ಪಬ್ಲಿಕೇಷನ್ಸ್ ಮತ್ತು ಬೆಂಗಳೂರು ಯುನಿವರ್ಸಿಟೀಸ್ ಸೋಷಿಯಲ್ ವರ್ಕ್ ಅಲ್ಯೂಮ್ನಿ ಅಸೋಸಿಯೇಷನ್ ಸಹಯೋಗದಿಂದ ಆಯೋಜಿಸಿದ್ದ ಪುಸ್ತಕಗಳ ಲೋಕಾರ್ಪಣೆ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಡಾ. ಸಿ.ಆರ್. ಗೋಪಾಲ್ ಅವರ ಸಾಮಾಜಿಕ ಕ್ರಿಯಾಚರಣೆ ಹಾಗೂ ಇನ್ನಿತರ ಹಲವು ಕೃತಿಗಳು ಸಮಾಜಕಾರ್ಯ ಅಂಶಗಳಿರುವ ಕೃತಿಗಳಾಗಿವೆ. ಪುಸ್ತಕ ಪ್ರಕಾಶಕರೂ ವ್ಯಾಪಾರಕ್ಕಷ್ಟೇ ಸೀಮಿತವಾಗಿರದೆ ಅನೇಕ ಮಹೋನ್ನತರವಾದ ಕೃತಿಗಳಿಗೆ ಬಂಡವಾಳ ಹೂಡಿ ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ ಎಂದರು.

ತತ್ವಜ್ಞಾನಿ ಶ್ರೀನಿವಾಸ ಅರ್ಕ ಮಾತನಾಡಿ, ಪುಸ್ತಕ ಬರೆಯುವ ಪ್ರವೃತ್ತಿಯು ಇಂದಿನ ದಿನದಲ್ಲಿ ಕಡಿಮೆಯಾಗುತ್ತಿರುವುದು ವಿಷಾದನೀಯ. ಬರವಣಿಗೆಯ ಮೂಲಕ ತಮ್ಮ ಜ್ಞಾನವನ್ನು ಲೋಕಕ್ಕೆ ವಿತರಿಸುವ ಲೇಖಕರು ಹೆಚ್ಚಾಗಬೇಕೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಲೇಖಕ ಶೇಖರ್ ಗಣಗಲೂರು, ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯ ಸಾಮಾಜಿಕ ಸುರಕ್ಷಾ ಅಧಿಕಾರಿ ನಾಗವೇಣಿ ಹೆಗಡೆ, ನಿಮ್ಹಾನ್ಸ್ ಮನೋವೈದ್ಯಕೀಯ ಸಮಾಜಕಾರ್ಯ ವಿಭಾಗದ ಪ್ರಾಧ್ಯಾಪಕ ಡಾ. ಎನ್. ಜನಾರ್ಧನ, ಬೆಂಗಳೂರು ಯೂನಿವರ್ಸಿಟೀಸ್ ಸೋಷಿಯಲ್ ವರ್ಕ್ ಅಲ್ಯೂಮ್ನಿ ಅಸೋಸಿಯೇಷನ್‌ನ ಅಧ್ಯಕ್ಷ ಡಾ. ಬಿ.ಕೆ. ಕೆಂಪೇಗೌಡ ಉಪಸ್ಥಿತರಿದ್ದರು.

**ವಾರ್ತಾಭಾರತಿ, 21 ಫೆಬ್ರವರಿ 2022**

---

**ಹೊಸ ದಿಗಂತ**

## ಸಮಾಜ ಸೇವೆಯಿಂದ ಮನಸ್ಸಿಗೆ ನೆಮ್ಮದಿ

ಬೆಂಗಳೂರು: ಸಮಾಜ ಸೇವೆ ಮಾಡುವುದರಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ ಮತ್ತು ನಮ್ಮಲ್ಲಿ ಸಕಾರಾತ್ಮಕ ಶಕ್ತಿ ಹೆಚ್ಚಾಗುತ್ತದೆ ಎಂದು ಸೆಂಟರ್ ಫಾರ್ ಕಾನ್ಶಿಯಸ್ ಅವೇರ್ನೆಸ್ ಅರ್ಕಧಾಮ ಸಂಸ್ಥಾಪಕ ಶ್ರೀನಿವಾಸ ಅರ್ಕ ಹೇಳಿದರು.

ನಿರುತ ಪಬ್ಲಿಕೇಷನ್ಸ್ ಮತ್ತು ಬೆಂಗಳೂರು ಯೂನಿವರ್ಸಿಟೀಸ್ ಸೋಷಿಯಲ್ ವರ್ಕ್ ಅಲ್ಯೂಮ್ನಿ ಅಸೋಸಿಯೇಷನ್ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಇಂದು ಅನೇಕರು ಹೆಸರು ಮತ್ತು ಹೊಗಳಿಕೆಗೆ ಆಸೆಪಟ್ಟು ಸಮಾಜ ಸೇವೆ ಮಾಡುತ್ತಾರೆ. ಆದರೆ, ನಿಸ್ವಾರ್ಥ ಭಾವದಿಂದ ಮಾಡುವ ಸೇವೆಯಿಂದ ಮನಸ್ಸಿಗೆ ಒಂದು ನೆಮ್ಮದಿ ಸಿಗುತ್ತದೆ. ಅದರೊಂದಿಗೆ ಅದೇ ರೀತಿಯ ಅವರಿಗೆ ಶುದ್ಧ ಪ್ರೀತಿಯೂ ಸಿಗುತ್ತದೆ. ಅಂತಹ ಕಾರ್ಯ ಮಾಡುವವರನ್ನು ಇಂದಿನ ಕಾಲಘಟ್ಟದಲ್ಲಿ ಕಾಣುವುದು ಕಷ್ಟ. ಆದರೆ, ಅದೇ ನಿಜವಾದ ಸಮಾಜ ಸೇವೆ ಎಂದರು.

ಸಾಹಿತ್ಯ ಎಂಬುದು ಒಂದು ರೀತಿಯ ಸಮಾಜ ಸೇವೆ, ಸೈನಿಕರು ಹೇಗೆ ಅಸ್ತ್ರಗಳನ್ನು ಹಿಡಿದು ದೇಶ ಕಾಯುತ್ತಿದ್ದಾರೋ, ಹಜಾಗೆ ಸಾಹಿತಿಗಳು ಲೇಖನಿ ಹಿಡಿದು ಜನರ ಮನಸ್ಸನ್ನು ಸರಿದಾರಿಗೆ ತಂದು ದೇಶದ ಒಳಗಿನ ಮನಃಶಾಂತಿ ಕಾಪಾಡಬಹುದು. ಆದರೆ, ಅದಕ್ಕೆ ಲೇಖನಿಯನ್ನು ಸರಿಯಾಗಿ ಬಳಸುವ ರೀತಿ ತಿಳಿದಿರಬೇಕು ಅಷ್ಟೆ ಎಂದು ಹೇಳಿದರು.



ಡಾ. ಸಿ.ಆರ್. ಗೋಪಾಲ್ ಅವರ ಸಾಮಾಜಿಕ ಕ್ರಿಯಾಚರಣೆ, ಡಾ. ಲೋಕೇಶ್ ಎಂ.ಯು. ಅವರ ಮನೋ–ವೈದ್ಯಕೀಯ ಸಮಾಜಕಾರ್ಯ ಹಾಗೂ ಎಚ್.ಎನ್. ಯಾದವಾಡ ಅವರ ಶಿಕ್ಷಣ ರಥ – ನೀತಿ ಪಥ ಎಂಬ ಪುಸ್ತಕಗಳು ಬಿಡುಗಡೆಗೊಳಿಸಲಾಯಿತು. ಸಮಾಜಕಾರ್ಯಕರ್ತೆ ರೂತ್ ಮನೋರಮಾ, ಲೇಖಕ ಶೇಖರ್ ಗಣಗಲೂರು, ಇಎಸ್‌ಐ ಆಸ್ಪತ್ರೆಯ ಸಾಮಾಜಿಕ ಸುರಕ್ಷಾ ಅಧಿಕಾರಿ ನಾಗವೇಣಿ ಹೆಗಡೆ ಮತ್ತಿತರರು ಹಾಜರಿದ್ದರು.

**ಹೊಸದಿಗಂತ, 21 ಫೆಬ್ರವರಿ 2022**

# Press Reports about
# Nirathanka and Niruta Publications

## ಸಾಹಿತಿಗಳ ಲೇಖನಿ ಹರಿತವಾಗಬೇಕು

VK ವಿಜಯ ಕರ್ನಾಟಕ



**ವಿಕ ಸುದ್ದಿಲೋಕ** ಬೆಂಗಳೂರು

ಸಾಹಿತ್ಯ ಎಂಬುದು ಒಂದು ರೀತಿಯ ಸಮಾಜ ಸೇವೆ. ಸೈನಿಕರು ಹೇಗೆ ಶಸ್ತ್ರಾಸ್ತ್ರಗಳನ್ನು ಹಿಡಿದು ದೇಶವನ್ನು ಕಾಯುತ್ತಿದ್ದಾರೋ ಹಾಗೆಯೇ ಸಾಹಿತಿಗಳು ಲೇಖನಿ ಹಿಡಿದು ಜನರ ಮನಸ್ಸನ್ನು ಸರಿ ದಾರಿಗೆ ತಂದು ಮನಃಶಾಂತಿ ಕಾಪಾಡುವ ಕೆಲಸ ಮಾಡಬೇಕು ಎಂದು ಸೆಂಟರ್ ಫಾರ್ ಕಾನ್ಷಿಯಸ್ ಅವೇರ್‌ನೆಸ್, ಅರ್ಕಧಾಮ ಸಂಸ್ಥಾಪಕ ಶ್ರೀನಿವಾಸ ಅರ್ಕ ಅಭಿಪ್ರಾಯಪಟ್ಟರು.

ನಿರುತ ಪಬ್ಲಿಕೇಷನ್ಸ್ ಮತ್ತು ಬೆಂಗಳೂರು ಯೂನಿವರ್ಸಿಟಿ ಸೋಷಿಯಲ್ ವರ್ಕ್ ಅಲ್ಯೂಮ್ನಿ ಅಸೋಸಿಯೇಷನ್ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾನುವಾರ ಅವರು ಮಾತನಾಡಿದರು.

"ಸಮಾಜದಲ್ಲಿ ಮನಃಶಾಂತಿಯನ್ನು ಕಾಪಾಡುವ ನಿಟ್ಟಿನಲ್ಲಿ ಲೇಖನಿಯನ್ನು ಸರಿಯಾಗಿ ಬಳಸುವ ರೀತಿ ಲೇಖಕರಿಗೆ ತಿಳಿದಿರಬೇಕು. ಇಂದು ಅನೇಕರು ಹೆಸರು ಮತ್ತು ಹೊಗಳಿಕೆಗೆ ಆಸೆ ಪಟ್ಟು ಸಮಾಜ ಸೇವೆ ಮಾಡುತ್ತಾರೆ. ಆದರೆ, ನಿಸ್ವಾರ್ಥ ಭಾವದಿಂದ ಮಾಡುವ ಸೇವೆಯಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಅದರೊಂದಿಗೆ ಅವರಿಗೆ ಶುದ್ಧ ಪ್ರೀತಿಯೂ ಸಿಗುತ್ತದೆ" ಎಂದರು.

ಸಮಾರಂಭದಲ್ಲಿ ಡಾ. ಸಿ.ಆರ್. ಗೋಪಾಲ್ ಅವರ ಸಾಮಾಜಿಕ ಕ್ರಿಯಾಚರಣೆ, ಡಾ. ಎಂ.ಯು. ಲೋಕೇಶ್ ಮತ್ತು ಎ.ವಿ. ಪವಿತ್ರಾ ಅವರ ಮನೋ-ವೈದ್ಯಕೀಯ ಸಮಾಜಕಾರ್ಯ ಪುಸ್ತಕಗಳು ಮತ್ತು ಎಚ್.ಎನ್. ಯಾದವಾಡ ಅವರ ಶಿಕ್ಷಣ ರಥ ನೀತಿ ಪಥ ಎಂಬ ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಸಾಮಾಜಿಕ ಕಾರ್ಯಕರ್ತೆ ರೂತ್ ಮನೋರಮಾ, ಲೇಖಕ ಶೇಖರ್ ಗಣಗಲೂರು ಮತ್ತಿತರರು ಉಪಸ್ಥಿತರಿದ್ದರು.

**22 ಫೆಬ್ರವರಿ 2022**

---

ಸುದ್ದಿ ಮಿಂಚು

## ಸಮಾಜಕಾರ್ಯ ಸಾಹಿತ್ಯ ರತ್ನ ಪ್ರಶಸ್ತಿ ವಿಜೇತ

**ಸಂಡೂರು:** ಪಟ್ಟಣದ ಸ್ಮಯೋರ್ ಕಾಲೋನಿ ನಿವಾಸಿ ಡಾ. ಸಿ.ಆರ್. ಗೋಪಾಲ್ ಅವರ ಸಾಮಾಜಿಕ ಕ್ರಿಯಾಚರಣೆ ಹಾಗೂ ಇನ್ನಿತರ ಕೃತಿಗಳು ಸಮಾಜಕಾರ್ಯ ಅಂಶಗಳಿರುವ ಕೃತಿಗಳ ಬಿಡುಗಡೆಯನ್ನು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ನಡೆಸಲಾಯಿತು.

ನಿರಾತಂಕ ಮತ್ತು ನಿರುತ ಪಬ್ಲಿಕೇಷನ್ಸ್ ಮತ್ತು ಬೆಂಗಳೂರು ಯುನಿವರ್ಸಿಟೀಸ್ ಸೋಷಿಯಲ್ ವರ್ಕ್ ಅಲ್ಯೂಮ್ನಿ ಅಸೋಸಿಯೇಷನ್ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪುಸ್ತಕಗಳ ಲೋಕಾರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಡಾ. ಸಿ.ಆರ್. ಗೋಪಾಲ್ ಅವರಿಗೆ ಸಮಾಜಕಾರ್ಯ ಸಾಹಿತ್ಯರತ್ನ ಪ್ರಶಸ್ತಿಯನ್ನು ಸಹ ನೀಡಿ ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿ ಇಂದು ಸಮಾಜದಲ್ಲಿ ಸಂಸ್ಕೃತಿ ಶಿಕ್ಷಣ




ಸಾಮಾಜಿಕ ಅಭ್ಯುದಯ ಮಾನವ ಸಂಪನ್ಮೂಲ ಹಾಗೂ ಸಮಾಜಕಾರ್ಯದ ಸಾಹಿತ್ಯ ಕ್ಷೇತ್ರಗಳಲ್ಲಿ ಉತ್ತಮ ಸೇವೆಯನ್ನು ಸಲ್ಲಿಸಿದವರನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದು ನನಗೆ ಹೆಮ್ಮೆ ಎನಿಸಿದೆ. ಅಲ್ಲದೆ ಇಂತಹ ಪ್ರಶಸ್ತಿಗಳು ವ್ಯಕ್ತಿಯನ್ನು ಇನ್ನೂ ಹೆಚ್ಚಿನ ಸಾಹಿತ್ಯ ಕೃಷಿಗೆ ತೊಡಗಿಸುವುದರ ಜೊತೆಗೆ ಸಾಮಾಜಿಕ ಜವಾಬ್ದಾರಿ ಮತ್ತು ಕಳಕಳಿಯನ್ನು ಹೆಚ್ಚಿಸುತ್ತವೆ. ಈಗಾಗಲೇ ಸಮಾಜಕಾರ್ಯ ವಿಭಾಗದಲ್ಲಿ ಅತಿ ಹೆಚ್ಚು ಕೃತಿಗಳನ್ನು ರಚಿಸಿದ್ದು ಅವುಗಳ ಪ್ರಕಾಶನ ಕಾರ್ಯ ವಿವಿಧ ಸಂಸ್ಥೆಗಳ ಮೂಲಕ ಬಿಡುಗಡೆಗೊಳಿಸಿದ್ದೇನೆ. ಅದರ ಫಲವಾಗಿ ಇಂದು ನಿರಾತಂಕ ಮತ್ತು ನಿರುತ ಪಬ್ಲಿಕೇಷನ್ಸ್ ನವರು ನನ್ನನ್ನು ಗುರುತಿಸಿದ್ದು ನನಗೆ ಹೆಮ್ಮೆ ಎನಿಸುತ್ತದೆ ಎಂದರು.

ಸಂಯುಕ್ತ ಕರ್ನಾಟಕ Wed 23 epaper

# Press Reports about Nirathanka and Niruta Publications

ಕನ್ನಡಪ್ರಭ

## ಅರಣ್ಯ ಒತ್ತುವರಿ: ರಮೇಶ್‌ಕುಮಾರ್ ವರ್ತನೆಗೆ ದೊರೆಸ್ವಾಮಿ ತೀವ್ರ ಆಕ್ಷೇಪ




**ನಗರದಲ್ಲಿ ಭಾನುವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಸಾಹಿತಿ ಪ್ರೊ. ಎಚ್.ಎಂ. ಮರುಳಸಿದ್ಧಯ್ಯ ಅವರ 'ಆತ್ಮೀಯರು' ಪುಸ್ತಕವನ್ನು ಸಾಹಿತಿ ಗೊ.ರು. ಚನ್ನಬಸಪ್ಪ ಬಿಡುಗಡೆಗೊಳಿಸಿದರು. ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ, ಸಾಮಾಜಿಕ ಹೋರಾಟಗಾರ ಎಸ್.ಆರ್. ಹಿರೇಮಠ ಹಾಜರಿದ್ದರು.**

ನಗರದಲ್ಲಿ ಭಾನುವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಸಾಹಿತಿ ಪ್ರೊ. ಎಚ್.ಎಂ. ಮರುಳಸಿದ್ಧಯ್ಯ ಅವರ 'ಆತ್ಮೀಯರು' ಪುಸ್ತಕವನ್ನು ಸಾಹಿತಿ ಗೊ.ರು. ಚನ್ನಬಸಪ್ಪ ಬಿಡುಗಡೆಗೊಳಿಸಿದರು. ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ, ಸಾಮಾಜಿಕ ಹೋರಾಟಗಾರ ಎಸ್.ಆರ್. ಹಿರೇಮಠ ಹಾಜರಿದ್ದರು.

ಬೆಂಗಳೂರು: ಅರಣ್ಯ ಒತ್ತುವರಿ ವಿಚಾರದಲ್ಲಿ ಶಾಸಕ ರಮೇಶ್ ಕುಮಾರ್ ಅವರ ವರ್ತನೆಗೆ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಭಾನುವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ನಿರುತ ಪಬ್ಲಿಕೇಷನ್ಸ್ ಹೊರತಂದಿರುವ ಸಾಹಿತಿ ಪ್ರೊ. ಎಚ್.ಎಂ. ಮರುಳಸಿದ್ಧಯ್ಯ ಅವರ 'ಆತ್ಮೀಯರು' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ರಮೇಶ್‌ಕುಮಾರ್ ಎಂದೂ ಯಾರನ್ನೂ ಟೀಕಿಸದವರು. ಆದರೆ, ಅರಣ್ಯ ಭೂಮಿ ಒತ್ತುವರಿ ವಿಚಾರದಲ್ಲಿ ಶಾಸನ ಸಭೆಯಲ್ಲಿ ಪ್ರಾಮಾಣಿಕ ಅಧಿಕಾರಿ ವಿ. ಬಾಲಸುಬ್ರಮಣಿಯನ್ ವಿರುದ್ಧ ಕೆಟ್ಟದಾಗಿ ಮಾತನಾಡಿರುವುದು ಸರಿಯಲ್ಲ ಎಂದು ದೊರೆಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಭೂ ಕಬಳಿಕೆಗೆ ಸಂಬಂಧಿಸಿದಂತೆ ಕಾರ್ಯಪಡೆ ಅಧ್ಯಕ್ಷರಾಗಿದ್ದ ನಿವೃತ್ತ ಐಎಎಸ್ ಅಧಿಕಾರಿ ವಿ. ಬಾಲಸುಬ್ರಮಣಿಯನ್ ಅವರು ಸರ್ಕಾರದ ದಾಖಲೆಗಳನ್ನು ನೋಡಿ, ಸ್ಥಳ ಪರಿಶೀಲಿಸಿ ವರದಿ ನೀಡಿದ್ದಾರೆ. ಎ.ಟಿ. ರಾಮಸ್ವಾಮಿ ಅವರ ಜಂಟಿ ಸಂಸದೀಯ ಸಮಿತಿ ಕೂಡ ವರದಿ ಸಲ್ಲಿಸಿದೆ. ಹೀಗಿರುವಾಗ ರಮೇಶ್ ಕುಮಾರ್ ತಮ್ಮ ವಾದವನ್ನು ಸದನದಲ್ಲಿ ಮಂಡಿಸುವುದನ್ನು ಬಿಟ್ಟು ಅಧಿಕಾರಿಯನ್ನು ದೂಷಿಸಿರುವುದು ಸರಿಯಲ್ಲ ಎಂದು ಹೇಳಿದರು. ರಮೇಶ್‌ಕುಮಾರ್ ಒತ್ತುವರಿ ಮಾಡಿದ್ದಾರೋ ಇಲ್ಲವೋ ಎನ್ನುವುದನ್ನು ನ್ಯಾಯಾಲಯ ನಿರ್ಧರಿಸುತ್ತದೆ. ಅದಕ್ಕೂ ಮುನ್ನ ಸದನದಲ್ಲಿ ಕೆಟ್ಟದಾಗಿ ಮಾತನಾಡುವುದು ಸರಿಯಲ್ಲ ಎಂದರು.

ಸಮಾಜ ಪರಿವರ್ತನೆ ಸಂಸ್ಥೆ ಮುಖ್ಯಸ್ಥ ಎಸ್.ಆರ್. ಹಿರೇಮಠ ಅವರ ಹೋರಾಟ, ಸಾಧನೆಗಳನ್ನು ಶ್ಲಾಘಿಸಿದ ದೊರೆಸ್ವಾಮಿ ಅವರು, ಇಂದಿನ ಸಂಘಟನೆಗಳು ಸಮಾಜದ ಹಿತಕ್ಕಾಗಿ ಹೋರಾಟ ನಡೆಸದೆ ತಮ್ಮ ತೆವಲಿಗಾಗಿ ಕೆಲಸ ಮಾಡುತ್ತಿವೆ. ಹೀಗಾಗಿ ಸಮಾಜಕ್ಕೆ ಮೂಲಸೌಕರ್ಯ ಪಡೆಯುವುದೇ ದುಸ್ತರವಾಗಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಮಾತನಾಡಿದ ಸಾಮಾಜಿಕ ಹೋರಾಟಗಾರ ಎಸ್.ಆರ್. ಹಿರೇಮಠ, ನಾವೀಗ ಭೂ ಕಬಳಿಕೆ ವಿರುದ್ಧ ಹೋರಾಟ ಆರಂಭಿಸಿದ್ದು, ಇದು ನಿರಂತರವಾಗಿ ನಡೆಯಲಿದೆ ಎಂದರು.

ವಿ. ಬಾಲಸುಬ್ರಮಣಿಯನ್ ವರದಿ ಪ್ರಕಾರ 1.95 ಲಕ್ಷ ಕೋಟಿಗಳಷ್ಟು ದೊಡ್ಡ ಪ್ರಮಾಣದ ಭೂಮಿ ಲೂಟಿಯಾಗಿದೆ. ಈ ಬಗ್ಗೆ ಎ.ಟಿ. ರಾಮಸ್ವಾಮಿ ಅವರ ಸದನ ಸಮಿತಿ ಕೂಡ ವರದಿ ನೀಡಿದ್ದು, ಅದರಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ನಡೆಸುತ್ತಿರುವ ನಮ್ಮ ಹೋರಾಟವನ್ನು ಇನ್ನೂ ತೀವ್ರಗೊಳಿಸಲಾಗುವುದು ಎಂದು ಹೇಳಿದರು.

ಆರಂಭದಲ್ಲಿ ಪ್ರೊ. ಎಚ್.ಎಂ. ಮರುಳಸಿದ್ಧಯ್ಯ ಮತ್ತು ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಗೊ.ರು. ಚನ್ನಬಸಪ್ಪ ಅವರು ಪುಸ್ತಕ ಕುರಿತು ಮಾತನಾಡಿದರು.

**19 ಆಗಸ್ಟ್ 2013**

# Press Reports about
# Nirathanka and Niruta Publications

ಪ್ರಜಾವಾಣಿ

ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

## 'ಆತ್ಮವಿಶ್ವಾಸದಿಂದ ಯಶಸ್ಸು'

**ಪ್ರಜಾವಾಣಿ ವಾರ್ತೆ**

ಪೀಣ್ಯ ದಾಸರಹಳ್ಳಿ: ನಂಬಿಕೆ, ಆತ್ಮಬಲ ಹಾಗೂ ವಿಶ್ವಾಸದಿಂದ ಕಾರ್ಯ ನಿರ್ವಹಿಸಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದು ಹಲಸೂರು ರಾಮಕೃಷ್ಣ ಆಶ್ರಮದ ಎಚ್.ಎಸ್. ಸ್ವಾಮಿ ಪ್ರಮಥೇಶಾನಂಧಜಿ ಮಹರಾಜ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಹೆಸರಘಟ್ಟ ರಸ್ತೆಯ ಎಂಇಐ ಕ್ರೀಡಾಂಗಣದಲ್ಲಿ ಈಚೆಗೆ ಆಯೋಜಿಸಿದ್ದ ನಿಸರ್ಗ ವಿದ್ಯಾನಿಕೇತನ ನಿಸರ್ಗೋತ್ಸವ ಶಿಶಿರ, ಸ್ವಾಮಿ ವಿವೇಕಾನಂದರ 150 ಜನ್ಮ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಚೈಲ್ಡ್ ರೈಟ್ ಟ್ರಸ್ಟ್ ಕಾರ್ಯನಿರ್ವಹಕ ನಿರ್ದೇಶಕ ವಾಸುದೇವಶರ್ಮ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.



ಹೆಸರಘಟ್ಟ ರಸ್ತೆಯಲ್ಲಿ ನಿಸರ್ಗ ವಿದ್ಯಾನಿಕೇತನ ನಿಸರ್ಗೋತ್ಸವ ಶಿಶಿರ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಜಾಗೃತಿ ಸೇವಾ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ವೈ.ಜಿ. ನಾಗರಾಜು, ಸಾಮಾಜಿಕ ಕಾರ್ಯಕರ್ತ ರಮೇಶ್ ಅವರನ್ನು ಸನ್ಮಾನಿಸಲಾಯಿತು. ಶಾಲಾ ಕಾರ್ಯದರ್ಶಿ ಎ. ನಾಗಭೂಷಣ್, ಎಚ್.ಎಚ್. ಸ್ವಾಮಿ ಪ್ರಮಥೇಶಾನಂಧಜಿ ಮಹರಾಜ್, ಮುಖ್ಯ ಶಿಕ್ಷಕ ಕೆ. ಉದಯ ರತ್ನ ಕುಮಾರ್ ಇತರರು ಹಾಜರಿದ್ದರು.

**ಸೋಮವಾರ 18 ಫೆಬ್ರವರಿ 2013**

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಂಗಳೂರು ಭಾನುವಾರ ನವೆಂಬರ್ 18, 2012 B ಪುಟ 28

## ಖಿನ್ನತೆ ಕುರಿತ ಕಾರ್ಯಾಗಾರ

ಬೆಂಗಳೂರು: 'ನಿರಾತಂಕ ಸಂಸ್ಥೆ ಮತ್ತು ಟ್ರೈಸ್ಟೇಟ್ ಕೌನ್ಸೆಲಿಂಗ್ ಸೆಂಟರ್ ನ್ಯೂಯಾರ್ಕ್ ವತಿಯಿಂದ ನವೆಂಬರ್ 24 ಮತ್ತು 25 ರಂದು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದ ಪ್ರೊ.ವೆಂಕಟಗಿರಿಗೌಡ ಸ್ಮಾರಕ ಸಭಾಂಗಣದಲ್ಲಿ ಖಿನ್ನತೆ ಮತ್ತಿತರ ವಿಷಯ ಕುರಿತು ತರಬೇತಿ ಕಾರ್ಯಾಗಾರ ಆಯೋಜಿಸಲಾಗಿದೆ' ಎಂದು ಸಾಮಾಜಿಕ ಕಾರ್ಯಕರ್ತ ವಾಸು ಸಿ. ಮೂರ್ತಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿ, 'ಕಾರ್ಯಾಗಾರದಲ್ಲಿ ಕೌಟುಂಬಿಕ ಚಿಕಿತ್ಸೆ, ಮಕ್ಕಳ ಸಂಬಂಧಿ ಸಮಸ್ಯೆ, ಉದ್ಯೋಗಸ್ಥರ ಸಂಘರ್ಷ ನಿವಾರಣಾ ಮಾದರಿ ಕುರಿತು ತರಬೇತಿ ನೀಡಲಾಗುವುದು' ಎಂದು ತಿಳಿಸಿದರು.

'ಒತ್ತಡದ ಜೀವನ ಶೈಲಿಯಿಂದಾಗಿ ಮಕ್ಕಳು, ಉದ್ಯೋಗಸ್ಥರು ಮಾನಸಿಕ ಸಮಸ್ಯೆಯಿಂದ ಬಳಲುತ್ತಿರುತ್ತಾರೆ. ಕಾರ್ಯಾಗಾರಕ್ಕೆ ಸಮಾಜಕಾರ್ಯ ವಿದ್ಯಾರ್ಥಿಗಳಿಗೆ ಒಂದು ಸಾವಿರ ಹಾಗೂ ಸಾರ್ವಜನಿಕರಿಗೆ 2,500 ರೂಪಾಯಿ ಪ್ರವೇಶ ಶುಲ್ಕವಿರುತ್ತದೆ' ಎಂದರು.

ಕನ್ನಡಪ್ರಭ

**ಬೆಂಗಳೂರು । ಬುಧವಾರ 9 । ಏಪ್ರಿಲ್ 2014**



ಸುದ್ದಿ ಸಂಕ್ಷೇಪ

## 2 ದಿನದ ತರಬೇತಿ

ನಿರಾತಂಕ ಸಂಸ್ಥೆ ವತಿಯಿಂದ ಸ್ವಯಂ ಸೇವಾ ಸಂಸ್ಥೆ (ಎನ್‌ಜಿಒ)ಗಳ ಕುರಿತು ಜೂನ್ 14 ಮತ್ತು 15ರಂದು 2ದಿನಗಳ ಕಾರ್ಯಾಗಾರವನ್ನು ಹಮ್ಮಿಕೊಂಡಿದೆ. ಎನ್‌ಜಿಒಗಳ ಬಂಡವಾಳ, ಸಾಮಾಜಿಕ ಜವಾಬ್ದಾರಿಗಳ ಕುರಿತು ನೋಶಿರ್ ಎಚ್. ದಾದ್ರಾವಾಲ ತರಬೇತಿ ನೀಡುತ್ತಾರೆ. ಮಾಹಿತಿಗಾಗಿ: ದಿ ಏಟ್ರಿಯಾ ಹೊಟೇಲ್, ನಂ. 1, ಪ್ಯಾಲೇಸ್ ರಸ್ತೆ. ಮೊ. 9980066890. ವೆಬ್‌ಸೈಟ್: ramesha.mh@gmail.com ಸಂಪರ್ಕಿಸಿ.